**ಮೊದಲನೇ ಅಪರ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಕನಕಪುರ.**
CC No.980/2019

CW -1 PW - 1

| | | |
|---|---|---|
| ಹೆಸರು | ಃ | ನಿಂಗಮ್ಮ |
| ಗಂಡನ ಹೆಸರು | ಃ | ವೀರಭದ್ರೇಗೌಡ |
| ವಯಸ್ಸು | ಃ | 60 ವರ್ಷ |
| ಉದ್ಯೋಗ | ಃ | ವ್ಯವಸಾಯ |
| ವಾಸ | ಃ | ವಡಲೇಗೌಡನದೊಡ್ಡಿ |

ಸಾಕ್ಷಿಯನ್ನು ಕರೆಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಃ ಮಾನ್ಯ ಎಪಿಪಿ ಯವರಿಂದ ಃ ದಿನಾಂಕ 17.09.2022

ನ್ಯಾಯಾಲಯದ ಮುಂದಿರುವ ಆರೋಪಿತರು ಗೊತ್ತು. ಚಾಸಾ-2 ನನ್ನ ಗಂಡ. ಚಾಸಾ-3 ನನ್ನ ಮೊಮ್ಮಗ. ಚಾಸಾ-4 ಗೊತ್ತು.

ಶಿವಲಿಂಗೇಗೌಡರ ತೋಟದಲ್ಲಿ 24 ನೇ ತಾರೀಖಿನಂದು 9 ಗಂಟೆ ಸಮಯದಲ್ಲಿ ರಾತ್ರಿ ನನ್ನ ಗಂಡ ಹಾಗೂ ನಾವು ತೋಟದಲ್ಲಿದ್ದೆವು. ನಂತರ ನನ್ನ ಗಂಡ ತೋಟದಿಂದ ಬರುತ್ತಿದ್ದಾಗ 1 ಮತ್ತು 2 ನೇ ಆರೋಪಿತರು ಕಾರು ಮತ್ತು ಬೈಕ್ ನ್ನು ಓಡಿಸಿಕೊಂಡು ಬಂದು ನನ್ನ ಗಂಡನಿಗೆ ಹತ್ತಿಸಲು ಪ್ರಯತ್ನ ಪಟ್ಟರು, ಆಗ ನನ್ನ ಗಂಡ ಕಿರುಚಿಕೊಂಡರು. ನಂತರ 1 ಮತ್ತು 2 ನೇ ಆರೋಪಿತರು ಅವರನ್ನು ಹೊಡೆಯಲು ಬಂದರು. ಆಗ ನಾನು ಮತ್ತು ಚಾಸಾ-3 ರವರು ಹೋದೆವು. ನಾವು ಆರೋಪಿತರನ್ನು ಆ ಬಗ್ಗೆ ಕೇಳಿದಾಗ ನಮ್ಮನ್ನು ಸಹ ಹೊಡೆದರು. ಅವಾಚ್ಯ ಶಬ್ದಗಳಿಂದ ಬೈದರು. ನಂತರ ನಾವು ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದೆವು. ನಂತರ ನಾನು ಪೋಲೀಸ್ ಠಾಣೆಗೆ ಹೋಗಿ ದೂರು ದಾಖಲಿಸಿದೆ. ನಾವು ದೂರು ನೀಡಿದ ಮೇಲೆ ನಮ್ಮನ್ನು ಊರಿನಿಂದ ಬಹಿಷ್ಕಾರ ಹಾಕಿದ್ದಾರೆ.

ದೂರು ನೀಡಿದ ನಂತರ ಪೋಲೀಸರು ಸ್ಥಳದ ಪಂಚನಾಮೆ ಮಾಡಿ ಕೃತ್ಯಕ್ಕೆ ಬಳಸಿದ ಕಲ್ಲನ್ನು ಅಮಾನತು ಪಡಿಸಿಕೊಂಡರು.

ಸಾಕ್ಷಿ ದೂರು ಮತ್ತು ಮಹಜರ್ ನಲ್ಲಿರುವ ತನ್ನ ಹೆಬ್ಬೆಟ್ಟಿನ ಗುರುತನ್ನು ನೋಡಿ ಗುರುತಿಸಿದ್ದು, ದೂರನ್ನು ನಿಪಿ.1 ಎಂದು, ಮಹಜರ್ ಅನ್ನು ನಿಪಿ-2 ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಕಲ್ಲನ್ನು ನೋಡಿ ಗುರುತಿಸಿದ್ದು

ಅದನ್ನು ಮು.ಮ-1 ಮತ್ತು 2 ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲುಗೆ ಅನುಮತಿ ಕೋರಿರುತ್ತಾರೆ. ಅನುಮತಿಸಲಾಯಿತು)**

ದಿಃ 24.12.2017 ರಂದು ರಾತ್ರಿ ಸುಮಾರು 9.15 ರ ಸಮಯದಲ್ಲಿ ನಾನು ಮನೆಯಲ್ಲಿದ್ದಾಗ, ಚಾಸಾ-2 ರವರು ಕೆಲಸ ಮಾಡಿಕೊಂಡು ಶಿವಲಿಂಗೇಗೌಡರ ತೋಟದಿಂದ ಬರುತ್ತಿದ್ದಾಗ 1 ಮತ್ತು 2 ನೇ ಆರೋಪಿತರು ನಮ್ಮ ಮನೆಯ ಬಳಿ ಚಾಸಾ-2 ರವರನ್ನು ಅಡ್ಡಗಟ್ಟಿ ಕೈಗಳಿಂದ ಹೊಡೆಯುತ್ತಿದ್ದರು ಎಂದರೆ ಸರಿ. ನನ್ನ ಗಂಡ ಕೂಗಿಕೊಂಡಾಗ ನಾನು ಮತ್ತು ಚಾಸಾ-3 ರವರು ಜಗಳ ಬಿಡಿಸಲು ಹೋದಾಗ 1 ಮತ್ತು 2 ನೇ ಆರೋಪಿತರು ನಮಗೆ ಅವಾಚ್ಯ ಶಬ್ದಗಳಿಂದ ಬೈದು, 1 ನೇ ಆರೋಪಿ ನನಗೆ ಕಲ್ಲಿನಿಂದ ಎಡಗಾಲಿಗೆ ಹೊಡೆದ ಎಂದರೆ ಸರಿ. 2 ನೇ ಆರೋಪಿ ಚಾಸಾ-3 ರವರನ್ನು ಕೆಳಗೆ ಕೆಡವಿ ಕೈಗಳಿಂದ ಹೊಡೆದು ಕಾಲಿನಿಂದ ಒದ್ದ ಎಂದರೆ ಸರಿ. ಅಷ್ಟರಲ್ಲಿ ಸ್ಥಳಕ್ಕೆ ಬಂದ 3 ನೇ ಆರೋಪಿ ಚೆಲುವವೀರಭದ್ರೇಗೌಡರ ವಂಶವನ್ನು ಇಲ್ಲದಂತೆ ಮಾಡಿ ಎಂದು ಎಲ್ಲರನ್ನು ಕೊಲೆ ಮಾಡಿ ಎಂದು ಪ್ರಚೋದನೆ ಮಾಡಿದ ಎಂದರೆ ಸರಿ. ಅದೇ ಸಮಯಕ್ಕೆ 4 ನೇ ಆರೋಪಿ ಬಂದು ನನ್ನ ಗಂಡನನ್ನು ಹಿಡಿದುಕೊಂಡು ಕೈಗಳಿಂದ ಹೊಡೆದು ಪ್ರಾಣ ಬೆದರಿಕೆ ಹಾಕಿದ ಎಂದರೆ ಸರಿ. ನಾನು ದೂರು ಕೊಟ್ಟು ನಂತರ ಕನಕಪುರ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದೆ ಎಂದರೆ ಸರಿ.

ನಂತರ ಪೋಲೀಸರು ದಿಃ26.12.2017 ರಂದು ಸ್ಥಳಕ್ಕೆ ಬಂದು ಪರಿಶೀಲನೆ ಮಾಡಿ ಮಹಜರ್ ಮಾಡಿದರು ಎಂದರೆ ಸರಿ.

**ಪಾಟೀ ಸವಾಲು : ಆರೋಪಿತರ ಪರ ಶ್ರೀ ಸಿ ಎಸ್ ಎನ್ ವಕೀಲರಿಂದಃ**

ಶಿವಲಿಂಗೇಗೌಡರ ಜಮೀನಿನಿಂದ ನಮ್ಮ ಮನೆ 1 ಕಿ.ಮೀಟರ್ ಅಂತರವಿದೆ. ಶಿವಲಿಂಗೇಗೌಡರು ಬೆಂಗಳೂರಿನಲ್ಲಿ ವಾಸವಾಗಿದ್ದಾರೆಂದರೆ ಸರಿ. ಗಲಾಟೆಯಾದಾಗ ನಾನು ಚಾಸಾ-2 ರವರ ಜೊತೆ ಇರಲಿಲ್ಲ. ನಾನು ಆ ಬಗ್ಗೆ ಪೋಲೀಸರಲ್ಲಿ ಹೇಳಿಕೆ ನೀಡಿಲ್ಲ ಎಂದರೆ ಸರಿ. ನಿಪಿ-1 ರಲ್ಲಿ ಏನು ಬರೆಯಲಾಗಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ.

ನಿಪಿ-2 ರಲ್ಲಿ ಏನು ಬರೆಯಲಾಗಿದೆ ಎಂದು ನನಗೆ ಗೊತ್ತಿಲ್ಲ, ನಾನು ಓದಿಲ್ಲ.

ಪೋಲೀಸರು ಮಹಜರ್ ಮಾಡಲು ಬಂದಾಗ ನನ್ನ ಸಂಬಂಧಿಗಳಾದ ಹಿರೇಗೌಡ ಮತ್ತು ಪುಟ್ಟಸ್ವಾಮಿಗೌಡರು ಇದ್ದರು. ನಿಪಿ-2 ಕ್ಕೆ ಸಹಿಯನ್ನು ಠಾಣೆಯಲ್ಲೇ ಮಾಡಿದ್ದೇನೆ. ಮುಂದುವರಿದು ಸಾಕ್ಷಿಯು ನಿಪಿ-2 ಕ್ಕೆ ಸಹಿಯನ್ನು ಮಹಜರ್ ಮಾಡಿದ ಸ್ಥಳದಲ್ಲಿ ಮಾಡಿದ್ದೇನೆಂದು ನುಡಿಯುತ್ತಾರೆ. ಮು.ಮ-1 ಮತ್ತು 2 ರಂತೆ ಕಲ್ಲುಗಳು ನಮ್ಮ ಊರಿನಲ್ಲಿ ಸಿಗುತ್ತವೆಂದರೆ ಸರಿ. ಮು.ಮ-1 ಮತ್ತು 2 ರಿಂದಲೇ ಹೊಡೆದರು ಎಂದು ತೋರಿಸಲು ಯಾವುದಾದರೂ ಗುರುತು ಇಟ್ಟುಕೊಂಡಿದ್ದೀರಾ ಎಂದರೆ ಸಾಕ್ಷಿಯು ಅವು ನಮ್ಮ ಮನೆಯ ಬಳಿ ಇದ್ದವು ಎಂದು ನುಡಿಯುತ್ತಾರೆ.

ನಮಗೂ ಆರೋಪಿತರಿಗೂ ಯಾವುದೇ ಗಲಾಟೆಯಾಗಿಲ್ಲ, ನಾನೇ ಬಿದ್ದು ಗಾಯ ಮಾಡಿಕೊಂಡಿದ್ದೇನೆಂದರೆ ಸರಿಯಲ್ಲ. ನನ್ನನ್ನು ಕನಕಪುರ ಸಾರ್ವಜನಿಕ ಆಸ್ಪತ್ರೆಗೆ ಚಾಸಾ-2 ರವರು ಕರೆದುಕೊಂಡು ಹೋದರು. ನಾನು ಅಲ್ಲಿಯೇ ಒಂದು ವಾರ ದಾಖಲಾಗಿದ್ದೆ. ನಾನೇ ಏಟು ಮಾಡಿಕೊಂಡು, ನಮಗೂ ಆರೋಪಿತರಿಗೂ ದ್ವೇಷವಿದ್ದ ಕಾರಣ ಚಾಸಾ-2 ರವರ ಮಾತು ಕೇಳಿ ಆರೋಪಿತರ ವಿರುದ್ದ ಅವರಿಗೆ ತೊಂದರೆ ಕೊಡಲು ಸುಳ್ಳು ದೂರು ದಾಖಲಿಸಿದ್ದೇವೆಂದರೆ ಸರಿಯಲ್ಲ. ಚಿಕಿತ್ಸೆ ಪಡೆದ ಬಗ್ಗೆ ಸುಳ್ಳು ದಾಖಲೆ ಸೃಷ್ಟಿಸಿದ್ದೇವೆಂದರೆ ಸರಿಯಲ್ಲ.

ಮರುವಿಚಾರಣೆಃ ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)

ಓ ಹೇ ಕೇ ಸ ಒ

ಮೊದಲನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಕನಕಪುರ